ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ. —ಜನ ಕೇಳುತ್ತಾರೆ, ಅದರಿಂದ ನಾವು ಕೇಳುತ್ತೇವೆ.

ಅಧ್ಯಕ್ಷರು. —ಪ್ರತಿ ತಿಂಗಳೂ ಕೂಡ ಇವೆಲ್ಲಾ ವಿಷಯಂಗಳೂ ಬರುತ್ತದೆಯೆಲ್ಲಾ. ಅಲ್ಲಿ ನೀವು ಕೇಳಬಹುದು.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ.—ಇದರಲ್ಲಿ ೩೫ ಹಳ್ಳಿಗಳನ್ನು ಬಿಟ್ಟಿದ್ದಾರೆ ಎಂದು ಹೇಳುತ್ತಾರೆ. ಇದು ಯಾವ ಹಂತದಲ್ಲಿದೆ ಅನ್ನುವುದನ್ನು ತಿಳಿಸುತ್ತೀರಾ ? ಆಮೇಲೆ ಈಗ ಈ ಬಗ್ಗೆ ಇರತಕ್ಕಂಥಾ ಹಣವನ್ನೂ ಸಹ ಖರ್ಚು ಮಾಡಿಲ್ಲಾ ಎಂದರೆ ಅಲ್ಲಿಗೆ ಈ ೩೫ ಹಳ್ಳಿಗಳನ್ನು ಬಿಡುವಂಥಾ ಪ್ರಶ್ನೆ ಇಲ್ಲಿ ಬರುತ್ತದೆ, ಅಲ್ಲೇ ಇರತಕ್ಕಂಥಾ ಜನರಿಗೆ ಈ ಸೌಲಭ್ಯವನ್ನು ಕೊಡಬಹುದಾಗಿತ್ತಲ್ಲಾ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಸದಸ್ಯರು ಹೇಳಿದಂತೆ ನಾವು ಇದರ ಬಗ್ಗೆ ಪೂರ್ತಿ ಹಣವನ್ನು ಖರ್ಚು ಮಾಡಿಲ್ಲ ಎಂದು ಹೇಳುವುದು ತಪ್ಪು. ಇದರ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಈ ಬಗ್ಗೆ ಕಳೆದ ವರ್ಷ ೫೧ ಲಕ್ಷ ರೂಪಾಯಿ ರಾಜ್ಯ ಸರ್ಕಾರದ ಯೋಜನೆ ಇತ್ತು ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತು. ನಮ್ಮ ಗುರಿ ೫೧ ಲಕ್ಷ ರೂಪಾಯಿ ಇದ್ದರೆ ಇದು ನಮ್ಮ ಗುರಿ ಮೀರಿ ಖರ್ಚಾಗಿದೆ ಅಂದರೆ ೬೨.೫೮ ಲಕ್ಷ ರೂಪಾಯಿಯಷ್ಟು ಖರ್ಚಾಗಿದೆ. ಮಂತ್ರಿ ೪೨೫೦ ಫಲಾನುಭವಿಗಳ ಗುರಿ ಇದ್ದರೆ ಅದರಲ್ಲಿ ೬೨೪೮ ಅಷ್ಟು ಗುರಿಯನ್ನು ಸಾಧಿಸಲಾಗಿದೆ. ಹಣ ಇನ್ನೂ ಉಳಿದಿದೆ, ಆದುದರಿಂದ ಮಾನ್ಯ ಸದಸ್ಯರು ಹಣ ಖರ್ಚಾಗಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ.

ಬೀದರ್ ಜಿಲ್ಲೆಯಲ್ಲಿ ಶಾಲಾ ಶಿಕ್ಷಕರುಗಳ ಕೊರತೆ

(೧೦೪೬). ಶ್ರೀ ಮಹಮ್ಮದ್ ಲಿಯಾಕುದ್ದೀನ್ (ಬೀದರ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಂಗಳನ್ನು ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಖಾಸಗೀ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

ಆ) ಖಾಸಗೀ ಮತ್ತು ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಹಾಗೇ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು ?

ಇ) ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಹುದ್ದೆಗಳು ಮಂಜೂರಾಗಬೇಕಿದೆಯೆ ?

ಈ) ಈ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ, ಇಲ್ಲದಿದ್ದಲ್ಲಿ ಯಾವಾಗ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಅನುದಾನಿತ ಪ್ರೌಢಶಾಲೆಗಳಲ್ಲಿ ಶಾಲಾ ಆಡಳಿತ ಮಂಡಳಿಯವರೇ ಹುದ್ದೆಗಳನ್ನು ಭರ್ತಿ ಮಾಡುವುದರಿಂದ ಕೊರತೆ ಉದ್ಭವಿಸುವ ಪ್ರಶ್ನೆ ಬರುವುದಿಲ್ಲ.

ಆ) (ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಖಾಸಗೀ ಶಾಲೆಗಳಲ್ಲಿ ಅನುದಾನ ಸಂಹಿತೆ ಪ್ರಕಾರ ವಿಭಾಗಗಳ ಸಂಖ್ಯೆಗನುಗುಣವಾಗಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುವುದು. ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇದೆ ಎಂಬುದು ಕಂಡು ಬಂದಲ್ಲಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಈ) (ಇ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

SRI MD. LIAQUDDIN BURANUDDIN.—In our District Bidar, particularly in Basavakalyan High School and Chidlagoppa High school, there are vacancies. No post has so far been filled up. There has always been complaints in this regard. People have represented

that the appointments have not been made. As regards private institutions, they have a separate proposal for sanction of posts but in Government schools, the Government has not taken any step to create posts particularly in Haji Mohammad Sultan School. Bidar and in Al Ameen Bidar. Their applications are pending.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು, ೨ ಶಾಲೆಗಳಿಗೆ ಉಪಾಧ್ಯಾಯರ ಕೊರತೆ ಇದೆ ಎಂದು ಹೇಳಿದ್ದಾರೆ. ಆ ಎರಡೂ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಿಂವುದಕ್ಕೆ ಏರ್ಪಾಡು ಮಾಡುತ್ತೇನೆ. ಇನ್ನು ಅನುದಾನ ಪಡೆಯುವ ಹೈಸ್ಕೂಲ್ಸ್ ಏನು ಇವೆ ಅವರು ಉಪಾಧ್ಯಾಯರುಗಳನ್ನು, ಭರ್ತಿ ಮಾಡಿಕೊಂಡಿದ್ದಾರೆ. ಸ್ವಾವಿ, ಸರ್ಕಾರೀ ಆಜ್ಞೆ ಪ್ರಕಾರ ಯಾರನ್ನೂ ಸಹ ನೇಮಕ ಮಾಡಕೂಡದಂ. ಅಲ್ಲದ ಈ ಸಂದರ್ಭದಲ್ಲಿ ಆ ಬಗ್ಗೆ ಯಾರಿಗೂ ಸಹ ಪರವಾನಗಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ.

ಹರಿಹರ ತಾಲ್ಲೂಕಿನಲ್ಲಿ ಭತ್ತದ ಬೆಳೆಗಳಿಗಂಟಿದ ಹಾನಿ.

೧೫೫೨. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಿಹರ ತಾಲ್ಲೂಕಿನಲ್ಲಿರುವ ಗ್ರಾಮಂಗಳಲ್ಲಿ ಭತ್ತದ ಬೆಳೆ ರೋಗದಿಂದ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈಗ ಮಳೆ ಬಿದ್ದಿರುವುದರಿಂದ, ರೈತರಿಗೆ ಭತ್ತದ ಬೀಜ ಮತ್ತು ಗೊಬ್ಬರ ಕೊಳ್ಳಲು ಸರ್ಕಾರದವರು ಸಾಲ ಒದಗಿಸಲು ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು). —

ಅ) ಬಂದಿದೆ. ಭತ್ತದ ಬೆಳೆಯು ಕಂದು ಜಿಗಿ ಹುಳುವಿನ ಭಾದೆಯಿಂದ ನಷ್ಟಕ್ಕೊಳಗಾಗಿದೆ.

ಆ) ಸಹಕಾರ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಮೂಲಕ ಅರ್ಹರಾದ ರೈತರಿಗೆ ಅಲ್ಪಾವಧಿ ಬೆಳೆ ಸಾಲಗಳನ್ನು ಕೊಡುವ ವ್ಯವಸ್ಥೆ ಇದೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಅಧ್ಯಕ್ಷರೇ, ಈ ಒಂದು ರೋಗದಿಂದ ಬೆಳೆ ನಾಶವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದ್ದು ಬ್ಯಾಂಕ್ ಮುಖೇನ ಸಾಲ ಕೊಡಿಸತಕ್ಕ ಏರ್ಪಾಡನ್ನು ಸರ್ಕಾರ ಮಾಡಿದೆ. ಆದರೆ ಸರ್ಕಾರದ ಸಹಕಾರಿ ಸಂಸ್ಥೆಗಳಿಂದ ಮಧ್ಯಮಾವಧಿ ಸಾಲ ಸಿಗುವ ವ್ಯವಸ್ಥೆಯನ್ನು ಸರ್ಕಾರ ಇನ್ನೂ ಮಾಡಿರುವುದಿಲ್ಲ. ಇದರಿಂದಾಗಿ ಆಲ್ಲಿನ ರೈತರು ನಮ್ಮ ಮೇಲೆ ಬೀಳುತ್ತಿದ್ದಾರೆ. ಆದ್ದರಿಂದ ಜಾಗ್ರತೆ ಸರ್ಕಾರದಿಂದ ಸಾಲ ಅವರಿಗೆ ಸಿಗುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೇ, ಸುಮಾರು ೭ ಸಾವಿರ ಎಕರೆಯಲ್ಲಿ ಕಂದು ಜಿಗಿ ಹುಳುವಿನ ಭಾದೆಯಿಂದ ಬೆಳೆ ನಷ್ಟಕೊಳಗಾಗಿದ್ದು ಸುಮಾರು ೫ ಲಕ್ಷ ೪೦ ಸಾವಿರ ರೂ ಗಳ ಒಂದು ಯೋಜನೆಯಿಂದ ಇದನ್ನು ಹತೋಟಿ ತರುವ ಕೆಲಸ ಮಾಡಲಾಗಿದೆ. ಹಾಗೂ ಅಲ್ಲಿನ ವಾಣಿಜ್ಯ ಬ್ಯಾಂಕ್‌ಗಳು ಅಲ್ಪಕಾಲಾವಧಿ ಸಾಲವನ್ನು ಮಧ್ಯಮಾವಧಿ ಸಾಲವೆಂದು ಪರಿಗಣಿಸತಕ್ಕದ್ದರ ಬಗ್ಗೆ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಸೇವಾ ಸಹಕಾರ ಸಂಘಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀವ್ರ ಪರಿಶೀಲನೆ ನಡೆದಿದೆ. ನೀರಿನ ತೆರಿಗೆಯನ್ನು ಮಾಫು ಮಾಡತಕ್ಕದ್ದು, ಕಂದಾಯ ಬಾಕಿಯನ್ನು ಮಾಫಿ ಮಾಡತಕ್ಕದ್ದು ಮತ್ತು ಸಹಕಾರಿ ಸಂಘಗಳ ಮೂಲಕ ಕೊಟ್ಟಿರತಕ್ಕ ಸಾಲವನ್ನು ಮಧ್ಯಮಾವಧಿ ಸಾಲವೆಂದು ಪರಿಗಣಿಸುವುದು ಈ ಮೂರು ವಿಷಯಗಳ ಬಗ್ಗೆ ೩ ಆಜ್ಞೆಗಳೊಡನೆ ಚರ್ಚೆಮಾಡುತ್ತಿರುವುದರಿಂದ ಇನ್ನು ಒಂದು ವಾರ ಅಥವಾ ೧೫ ದಿವಸಗಳಲ್ಲಿ ಈ ಬಗ್ಗೆ ನಮ್ಮ ನಿರ್ಧಾರವನ್ನು ಪ್ರಕಟ ಮಾಡುತ್ತೇವೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಇವತ್ತು ಆ ಜನಕ್ಕೆ ಬೀಜ ಮತ್ತು ಗೊಬ್ಬರ ಅವಶ್ಯಕವಾಗಿ ಬೇಕಾಗಿದೆ. ಇವತ್ತು ಅತನಿಗೆ ಭತ್ತ ನಷ್ಟವಾಗಿದ್ದು, ಸಾಲ ಸಿಗದಿದ್ದರೆ, ಆತನಿಗೆ ಫಾನಲ್ ಮೂಲಕ ನೀರು ಬಿಟ್ಟು ಏನು ಪ್ರಯೋಜನ? ಆದ್ದರಿಂದ ೧೫ ದಿವಸಗಳ ಬದಲಾಗಿ ಇನ್ನು ೪-೫ ದಿನಗಳಲ್ಲಿ ಈ ಬಗ್ಗೆ ತೀರ್ಮಾನ ಮಾಡಿ. ಎಲ್ಲಾ ರೆಕಾರ್ಡ್ಸ್ ಸರ್ಕಾರದ ಮುಂದೆ ಇದೆ.